## ನನ್ನ ಓದು

ವಿಶ್ವಪ್ರಜ್ಞೆಗೂ ಸ್ತ್ರೀಪ್ರಜ್ಞೆಗೂ ಇರುವುದು ಕರುಳಬಳ್ಳಿಯ ಸಂಬಂಧ. ಇದು ಕೇವಲ ಬುದ್ಧಿಯದ್ದಲ್ಲ, ತತ್ವದ್ದಲ್ಲ, ಅದು ಕಾರ್ಯ ಕಾರಣ ಸಂಬಂಧದ್ದೂ ಅಲ್ಲ. ಅದು ಕರಾರುಗಳನ್ನು ಒಪ್ಪುವುದಿಲ್ಲ. ಕರಾರುಗಳನ್ನು ಹಾಕುವುದೂ ಇಲ್ಲ. ಅದು ಸದಾ ನಿರ್ವ್ಯಾಜವಾಗಿರಲು ತಹತಹಿಸುವಂಥದ್ದು. ಅದು 'ಇಡಿ'ಯಾದದ್ದು. ಶಿವಪ್ರಕಾಶರ ಕಾವ್ಯದಲ್ಲಿ ದೇಶ ಪರದೇಶಗಳ ಪರಿಕಲ್ಪನೆಗಳೇ ಬರಲಾರವು. ಹೀಗೆಲ್ಲ ಹೇಳುತ್ತಿರುವಾಗ ಸ್ಪಷ್ಟಪಡಿಸಬೇಕಾದೊಂದು ಅಂಶವಿದೆ. ಲೋಕ ಕಾರುಣ್ಯವಿಲ್ಲದವರು ಕವಿಯಾಗಲಾರರು ಎನ್ನುವ ಅಂಶದ್ದು. ಶಿವಪ್ರಕಾಶರ ಕಾವ್ಯಕ್ಕೆ ಲೋಕದ ಜೊತೆ ಇರುವುದು ಮಾನವೀಯ ಮೌಲ್ಯವಾಗಿ 'ಲೋಕ ಕಾರುಣ್ಯ'ದ್ದಲ್ಲ, ಮೂಲಧಾತುವಾಗಿಯೇ ಅದು ಜೀವ ಕಾರುಣ್ಯವನ್ನು ತನ್ನ ರಕ್ತಮಾಂಸವಾಗಿಸಿಕೊಳ್ಳಲು ನಿರಂತರವಾಗಿ ಹವಣಿಸುತ್ತದೆ. ಇದು ನಿಸ್ಸಂದೇಹವಾಗಿ ತಾಯಿಪ್ರಜ್ಞೆಯದ್ದು. ತಾಯ್ತನವನ್ನು ಕೇವಲ ಬೌದ್ಧಿಕವಾಗಿ ಆವಾಹಿಸಿಕೊಳ್ಳಲು ಅಲ್ಲ; ಅದೇ ತನ್ನ ಭಾವಕೋಶವಾಗಬೇಕೆಂದು ಕವಿ ಆರ್ತರಾಗಿ ಮತ್ತೆ ಮತ್ತೆ ಹಂಬಲಿಸುತ್ತಾರೆ. ಇದೊಂದು ಜೀವನ್ಮರಣದ ಸಂಗತಿಯಾಗಿ ಅವರಿಗೆ ಕಾಣಿಸುತ್ತದೆ ಎನ್ನುವುದು ಅವರ ಈ ಸಮಗ್ರ ಕಾವ್ಯದ ಓದು, ಅದರಲ್ಲಿ ನಮಗೆ ಕೇಳಿಯೇ ಕೇಳಿಸುವ ಪ್ರಬಂಧಧ್ವನಿಯಲ್ಲಿ ನಾವು ಗುರುತಿಸಬಹುದು.

ಇದೇ ಪ್ರಬಂಧಧ್ವನಿಯನ್ನು ನೆಚ್ಚಿ ಹೇಳುವುದಾದರೆ, ಇವರನ್ನು ನಿಡುಗಾಲದುದ್ದಕ್ಕೂ ಕಾಡಿರುವ, ಅವರ ಕಾವ್ಯದ ಮುಖ್ಯ ಕಾಳಜಿಗಳೆಂದು ಗುರುತಿಸಬಹುದಾದ ಮತ್ತೊಂದು ಅಂಶ ಲೋಕದ ಅಸೀಮ ಕ್ರೌರ್ಯದ್ದು. ಈ ಅಸೀಮ ಕ್ರೌರ್ಯವನ್ನು ಮೆಟ್ಟಲೆಂದೇ, ಮೀರಲೆಂದೇ ಅವರು ತಾಯ ಜೀವಾಮೃತಕ್ಕಾಗಿ ಹಸುಗೂಸಿನಂತೆ, ಅಸಹಾಯಕ ಹುಲುಮಾನವನಂತೆ ಆರ್ದ್ರವಾಗಿ ಬೇಡುವುದು. ಲೋಕ ಕ್ರೌರ್ಯ ಮತ್ತು ತಾಯ ಮೃತದೊಲವುಗಳು ಶಿವಪ್ರಕಾಶರ ಕಾವ್ಯದ ಎರಡು ಕೇಂದ್ರಗಳು. ಈ ಮಾತನ್ನು ಹೇಳುತ್ತಿರುವಾಗ ಇತರ ಆಯಾಮಗಳ ಕಡೆ ಈ ಲೇಖನಕ್ಕೆ ಗಮನವಿಲ್ಲ ಎಂದರ್ಥವಲ್ಲ. ಆ ಎಲ್ಲವನ್ನೂ ಈ ಎರಡು ವಿಶಾಲ ಕೇಂದ್ರಗಳಲ್ಲಿ ತಂದು ಚರ್ಚಿಸಲು ಅವಕಾಶವಿದೆ ಎಂದು ನಾನು ನಂಬಿದ್ದೇನೆ. ಇವುಗಳನ್ನು ಒಟ್ಟಾಗಿಸಿ ಬಸವ ಪ್ರಜ್ಞೆಯೆಂದು, ಕಲ್ಯಾಣ ಪ್ರಜ್ಞೆಯೆಂದು, ತ್ರಿಕಾಲ ಪ್ರಜ್ಞೆಯೆಂದು ಇವರ ಕಾವ್ಯದ ಆಶಯಗಳನ್ನು ಚರ್ಚಿಸಲು ಅವಕಾಶವಿದೆ. ಶಿವಪ್ರಕಾಶರ ಕಾವ್ಯವನ್ನು ಓದುತ್ತಿದ್ದಾಗ ಅಯಾಚಿತವಾಗಿ ಕುವೆಂಪು ಅವರು ಕವಿಯನ್ನು ವರ್ಣಿಸುವ ಚಿತ್ರವೊಂದು ನೆನಪಾಗುತ್ತದೆ. ನಿಜ ಕವಿಯು ಅವನೊಂದು ಕೈಯನ್ನು ಆಕಾಶಕ್ಕೆ ಚಾಚಿದ್ದರೆ ಮತ್ತೊಂದು ಕೈಯನ್ನು ಪಾತಳದಲ್ಲಿ ಹುದುಗಿಸಿರುತ್ತಾನೆ ಎನ್ನುತ್ತಾರೆ ಅವರು. ತ್ರಿಕಾಲ ಪ್ರಜ್ಞೆಯ ಈ ವ್ಯಾಖ್ಯಾನಕ್ಕೆ ಶಿವಪ್ರಕಾಶರ ಕಾವ್ಯ ಅತ್ಯುತ್ತಮ ಉದಾಹರಣೆ. ಈ ಕಾರಣಕ್ಕಾಗಿಯೇ ಇವರನ್ನು ಅನುಭಾವಿ ಕವಿ, ಸಮಾಜಮುಖಿ ಕವಿ ಎನ್ನುವ ದೃಷ್ಟಿಕೋನಗಳಲ್ಲಿ ಚರ್ಚಿಸಲು ನನಗೆ ಹಿಂಜರಿಕೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಇವರು ವಚನ ಪರಂಪರೆಯ ಸಂಬಂಧಿ. ಇಹಪರಗಳನ್ನು ಬೇರೆ ಮಾಡುವ ವ್ಯರ್ಥ ಪ್ರಯತ್ನಕ್ಕೆ ಇವರು ಹೋಗುವುದಿಲ್ಲ. ಇಹಪರಗಳೆರಡೂ ವರ್ತಮಾನದ ಫಲಗಳೇ ಎನ್ನುವುದನ್ನು ಇವರು ನಂಬಿದ್ದಾರೆ.

ಬದುಕಿನ ವಾಸ್ತವದ ಕ್ರೌರ್ಯ ಮತ್ತು ಪೊರೆಯಬಲ್ಲ ತಾಯಮೃತಗಳ ನಡುವಿನ ಆಳ ಕಂದರವನ್ನು ಕಂಡು ಈ ಕವಿ ಕಂಗಾಲಾಗುವುದಿಲ್ಲ. ತಾಯ ಮೇಲೆ ಅಂಥ ನಂಬಿಕೆಯೇ ಇವರನ್ನು ಮುನ್ನಡೆಸುತ್ತದೆ. ಇದನ್ನು ಅನಾವರಣ ಮಾಡಿಕೊಳ್ಳುವ ಇವರ ಕವಿತೆ 'ಭಗೀರಥ ಪ್ರಾರ್ಥನೆ'.

ಸಾಕು ಸಾಕವ್ವ ಸಾಕಿನ್ನು
ಸಾಕು ಹುದುಗಿದ್ದು ಸುರನದಿಯಾಗಿ
ಹರನ ಜಟೆಯಲ್ಲಿ